2617/19

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–560003

## KARNATAKA SECONDARY EDUCATION EXAMINATION BOARD MALLESHWARAM, BENGALURU-560003

**ಕೆ.ಓ.ಎಸ್. ಪರೀಕ್ಷೆ ಜುಲೈ – 2021**

**KOS EXAMINATION JULY – 2021**

| | | |
|---|---|---|
| Subject / ವಿಷಯ | : | 1st Language Kannada<br>ಪ್ರಥಮ ಭಾಷೆ ಕನ್ನಡ |
| Subject Code / ವಿಷಯ ಸಂಕೇತ | : | 208-NS |
| Maximum Marks / ಗರಿಷ್ಠ ಅಂಕಗಳು | : | 125 |
| Duration of Exam / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| Time alloted to read the Instructions / ಸೂಚನೆಗಳನ್ನು ಓದಲು ನಿಗಧಿಗೊಳಿಸಿರುವ ಅವಧಿ : | : | 15 minutes / 15 ನಿಮಿಷಗಳು |
| Timings / ಸಮಯ | : | 9:30 AM – 12:45 PM |

### ಅಭ್ಯರ್ಥಿಗೆ ಸಾಮಾನ್ಯ ಸೂಚನೆಗಳು / General Instructions to the Candidate

1. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿರುವಂತೆ ಉತ್ತರ ಪತ್ರಿಕೆಯಲ್ಲಿ ನೀಡಿರುವ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

   Candidate should write their register number on the answer booklet as printed in their hall ticket.

2. ಅಭ್ಯರ್ಥಿಯು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ನೋಂದಣಿ ಸಂಖ್ಯೆ ಬರೆಯತಕ್ಕದ್ದು.

   Candidate should write their register number on the additional answer sheets in the space provided.

3. ಅಭ್ಯರ್ಥಿಯು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೊಂದಣಿ ಸಂಖ್ಯೆ, ಗುರುತು, ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ ಪತ್ರಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

   Candidate should not write register number, mark, sign or any other information in the answer booklet except in the specified place. In case, if found any information in the sheets of the answer scripts, such answer scripts will not be considered for evaluation.

4. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidate found to be indulged in malpractice during examination and violating examination instructions, action will be taken against such candidate as per the examination rules and his/her answer booklet will not be considered for evaluation.

ಸೂಚನೆಗಳು : (i) ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ಉತ್ತರ ಪತ್ರಿಕೆಯಲ್ಲಿಯೇ ಬರೆಯಿರಿ.

(ii) ಪ್ರಶ್ನೆ ಮತ್ತು ಉಪ–ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾಗಿ ಬರೆಯಿರಿ.

I. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ಪದದಲ್ಲಿ ಉತ್ತರಿಸಿ. $(6 \times 1 = 6)$

1. ನನ್ನೂರಿನಲ್ಲಿ ವಾರದ ಯಾವ ದಿನ ಸಂತೆ ನಡೆಯುತ್ತದೆ?
2. ಮಾಸ್ಕೊ ಸರ್ಕಸ್‌ನ್ನು ಲೇಖಕರು ಯಾವ ಊರಿನಲ್ಲಿ ನೋಡಿದರು?
3. ನಮ್ಮ ರಾಷ್ಟ್ರದ ನಂದಾದೀವಿಗೆಯಾಗಿದ್ದವರು ಯಾರು?
4. ಹಸು ಮಕ್ಕಳಾಡಿದರೆ ಅಂಗಳ ಏನಾಗುತ್ತದೆ?
5. ಗೋಗ್ರಹಣದ ಸುದ್ದಿ ತಂದವರು ಯಾರು?
6. ತೆಂಕಣದ ಗಾಳಿ ಸೋಂಕಿದಾಗ ಕವಿ ಪಂಪನಿಗೆ ಯಾವುದರ ನೆನಪಾಗುತ್ತದೆ?

II. ಕೆಳಗೆ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ : $(6 \times 1 = 6)$

1. ಕನ್ನಡ ವರ್ಣಮಾಲೆಯಲ್ಲಿರುವ ಹೃಸ್ವಸ್ವರಗಳ ಸಂಖ್ಯೆ ____________
2. ನುಡಿದರೆ ____________ ಸಲಾಕೆಯಂತಿರಬೇಕು.
3. ಶರಣರ ಗುಣವನ್ನು ____________ ನೋಡು.
4 ಬನವಾಸಿಯ ಜನ ವಿದ್ಯಾವಂತರು, ____________ ಪ್ರಿಯರು.
5. ಕೋಟಿ ವಿದ್ಯೆಗಳಲ್ಲಿ ____________ ವಿದ್ಯೆಯೇ ಮೇಲು.
6. ಬಿಡದೆ ಧ್ಯಾನಿಸಿದರೆ ಚಿಂತೆ ____________.

III. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ. (6 × 1 = 6)

1. ಕೊಳಲು, ನವಿಲು, ಪಾಂಚಜನ್ಯ, ಭಾವತರಂಗ

2. ಮಂಡೋದರಿ, ಈಗಿನ ನನ್ನೂರು, ಆಹುತಿ ನಾವೆಲ್ಲರೂ ಒಂದೇ ಜಾತಿ

3. ಬಾತ್‌ರೂಂ, ಸರ್ಕಸ್, ಫೈರ್, ಆಟಗಾರ

4. ಯಮ, ಯಾತ್ರೆ, ಪಕ್ಷಿ, ಅಂಚೆ

5. ಬಸವಣ್ಣ, ಅಕ್ಕಮಹಾದೇವಿ, ದೇವರದಾಸಿಮಯ್ಯ, ಪುರಂದರದಾಸರು

6. ನಡೆನಡೆ, ಕೊಡುಕೊಡು, ಬೇಗಬೇಗ, ಹಣ್ಣುಹಂಪಲು

IV. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ, ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (6 × 1 = 6)

1. ಬಸವಣ್ಣ : ಕೂಡಲಸಂಗಮದೇವ : : ಅಕ್ಕಮಹಾದೇವಿ : ____________

2. ಕವಿ : ಕಬ್ಬಿಗ : : ಕಾರ್ಯ : ____________

3. ಸೀತೆ : ರಾಮ : : ಮಂಡೋದರಿ : ____________

4. ವಿದ್ಯಾರ್ಥಿ : ಸವರ್ಣದೀರ್ಘಸಂಧಿ : : ಸುರೇಂದ್ರ : ____________

5. ಕುಪ್ಪಸ : ರವಿಕೆ : : ಅಕ್ಕರೆ : ____________

6. ನನ್ನ ಕವಿತೆ : ಸವಿತಾನಾಗಭೂಷಣ : : ಕೊನೆಯ ಹಾಡು : ____________

V. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಕ್ರಮಾಕ್ಷರದೊಂದಿಗೆ ಆರಿಸಿ ಬರೆಯಿರಿ : (5 × 1 = 5)

1. ಲಕ್ಷ್ಮಿಯು ಪ್ರೀತಿಯಿಂದ ಸಾಕಿದ್ದ ಸಾಕು ಪ್ರಾಣಿ

   (ಅ) ಜಿಂಕೆಯ ಮರಿ

   (ಆ) ಕೋತಿಯ ಮರಿ

   (ಇ) ಬೆಕ್ಕಿನ ಮರಿ

   (ಈ) ಕುರಿಯ ಮರಿ

2. ಕನ್ನಡ ಕುವರರಲ್ಲಿ ಈ ವೃತ್ತಿ ಕರಗತವಾಗಿರಬೇಕಾಗಿದೆ.

(ಅ) ಸೋಮಾರಿತನ

(ಆ) ವೀರ ವೃತ್ತಿ

(ಇ) ವೈದ್ಯ ವೃತ್ತಿ

(ಈ) ಸಾಹಸ ವೃತ್ತಿ

3. ಭರತ ಭೂಮಿ ನನ್ನ ಪೊರೆವ

(ಅ) ದೇಹ

(ಆ) ದೇಶ

(ಇ) ತಾಯಿ

(ಈ) ತೊಟ್ಟಿಲು

4. ಮಕ್ಕಳಿಲ್ಲದ ಚಿಂತೆ, ಮಕ್ಕಳಾದರು

(ಅ) ಚಿಂತೆ

(ಆ) ಸಂತೆ

(ಇ) ಕಂತೆ

(ಈ) ಬೊಂತೆ

5. ಅಕ್ಕರೆಯ ದನಿಯಾಕೆ

(ಅ) ತಾಯಿ

(ಆ) ತಂಗಿ

(ಇ) ಹೆಂಡತಿ

(ಈ) ಅತ್ತಿಗೆ

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **(6 × 1 = 6)**

1. ಲೇಖಕ ಅ.ರಾ. ಮಿತ್ರ ಅವರ ಪರಮಶತ್ರು ಯಾರು?

2. ಗಾಂಧೀಜಿಯವರು ಜೀವನದುದ್ದಕ್ಕೂ ಯಾವ ತತ್ತ್ವವನ್ನು ಎತ್ತಿ ಹಿಡಿದರು?

3. ಕೆರೆಯಲ್ಲಿ ಅರ್ಧ ಮುಳುಗಿದ್ದ ದಿಮ್ಮಿ ಹೇಗೆ ಕಾಣುತ್ತಿತ್ತು?

4. ಮಾನವನು ಭಗವಂತನಿಗೆ ಯಾವಾಗ ಶರಣಾಗುತ್ತಾನೆ?

5. ಚೆಲುವಿನ ಹೆಣ್ಣನ್ನು ಕವಿ ಎಲ್ಲಿ ಕಂಡರು?

6. 'ನನ್ನ ಕವಿತೆ'ಗೆ ಎಂಥ ಹೃದಯವಿದೆ ಎಂದು ಕವಯಿತ್ರಿ ಹೇಳಿದ್ದಾರೆ?

VII. (ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು, ಸಂಧಿಯ ಹೆಸರನ್ನು ಬರೆಯಿರಿ : (2 × 1 = 2)

(i) ಮೇಲೆಸೆದು

(ii) ದೇವಾಲಯ

(ಆ) ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ ಬರೆದು, ಸಮಾಸದ ಹೆಸರನ್ನು ಬರೆಯಿರಿ : (2 × 1 = 2)

(i) ದೇವಮನೆ

(ii) ಕೈ ಹಿಡಿ

(ಇ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : (2 × 1 = 2)

(i) ತನು

(ii) ಚರಣ

(ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : (2 × 1 = 2)

(i) ಸುಖ

(ii) ಯೋಗ್ಯ

(ಉ) ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ : (2 × 1 = 2)

(i) ಶಿಸ್ತಿನ ಸಿಪಾಯಿ

(ii) ಮೇಷ್ಟ್ರು

VIII. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ. (5 × 1 = 5)

ಭಾರತದ ಫುಟ್‌ಬಾಲ್ ರಂಗದಲ್ಲಿ ಮಿಂಚಿದ ಕನ್ನಡಿಗ ಎಂದರೆ ಫುಟ್‌ಬಾಲ್ ಕೆಂಪಯ್ಯ ಇವರನ್ನು ಒಲಂಪಿಯನ್ ಕೆಂಪಯ್ಯ ಎಂದೂ ಕರೆಯುವರು. ಇವರು ಮೂಲತಃ ಕರ್ನಾಟಕ ರಾಜ್ಯದ ಬೆಂಗಳೂರಿನವರು ಆದರೂ ಬಂಗಾಳದಲ್ಲಿ ಹೆಚ್ಚು ಪ್ರಸಿದ್ಧರಾಗಿದ್ದಾರೆ. ಅಂತರಾಷ್ಟ್ರೀಯ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಸತತ ಎರಡು ಸಲ ಆಟವಾಡಿ ಹೆಮ್ಮೆ ತಂದಿದ್ದಾರೆ.

1954ರಲ್ಲಿ ಮದರಾಸಿನಲ್ಲಿ ನಡೆದ ಸಂತೋಷ್ ಟ್ರೋಫಿಯಲ್ಲಿ ಮೈಸೂರು ರಾಜ್ಯವನ್ನು ಪ್ರತಿನಿಧಿಸಿ ಎಲ್ಲರ ಗಮನ ಸೆಳೆದರು. ಅಲ್ಲಿಂದಲೇ ಅವರು ಭಾರತ ತಂಡಕ್ಕೆ ಆಯ್ಕೆಯಾಗಿ ತರಬೇತಿ ಶಿಬಿರಕ್ಕೆ ಸೇರಿದರು. ಕೆಂಪಯ್ಯನವರು ತಾವಿದ್ದ ಬಂಗಾಳ ತಂಡವನ್ನು 7 ವರ್ಷಗಳ ಕಾಲ ಪ್ರತಿನಿಧಿಸಿದ್ದರು. ಕೆಂಪಯ್ಯನವರ ಕ್ರೀಡಾ–ಸಾಮರ್ಥ್ಯವನ್ನು, ಕ್ರೀಡಾ ಪ್ರತಿಭೆಯನ್ನು ನೋಡಿ ಮುಂಬೈನ ಟಾಟಾ ಸಂಸ್ಥೆ ಇವರಿಗೆ ಉದ್ಯೋಗ ನೀಡಲು ಮುಂದೆ ಬಂದಿತು.

ಪ್ರಶ್ನೆಗಳು :

1. ಭಾರತದ ಫುಟ್‌ಬಾಲ್ ರಂಗದಲ್ಲಿ ಮಿಂಚಿದ ಕನ್ನಡಿಗ ಯಾರು?
2. ಕೆಂಪಯ್ಯನವರು ಮೂಲತಃ ಎಲ್ಲಿಯವರು?
3. ಅಂತರಾಷ್ಟ್ರೀಯ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಕೆಂಪಯ್ಯನವರು ಎಷ್ಟು ಸಲ ಆಟವಾಡಿದ್ದಾರೆ?
4. ಕೆಂಪಯ್ಯನವರು ಬಂಗಾಳ ತಂಡವನ್ನು ಎಷ್ಟು ವರ್ಷಗಳ ಕಾಲ ಪ್ರತಿನಿಧಿಸಿದ್ದರು?
5. ಕೆಂಪಯ್ಯನವರಿಗೆ ಉದ್ಯೋಗ ನೀಡಲು ಮುಂದೆ ಬಂದ ಸಂಸ್ಥೆ ಯಾವುದು?

IX. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ವಾಕ್ಯಗಳಲ್ಲಿ ಉತ್ತರಿಸಿ. (10 × 2 = 20)

1. ಹಳೆಯ ಕಾಲದ ಯಾವ ಯಾವ ವಸ್ತುಗಳು ಮಾಯವಾಗುತ್ತಿವೆ?
2. ಮಾಸ್ಕೊ ಸರ್ಕಸ್‌ನಲ್ಲಿ ಶೀಷೆಗಳ ಆಟದ ವಿಶೇಷತೆ ತಿಳಿಸಿ.
3. ಹಿಮಾಲಯ ಕಲುಷಿತಗೊಳ್ಳಲು ಕಾರಣವೇನು?
4. ಲೇಖಕರಿಗೆ ಮರಕುಟುಕನನ್ನು ನೋಡಿ ತಲೆಸುತ್ತು ಬಂದದ್ದು ಏಕೆ?

5. ಮಂಡೋದರಿಯನ್ನು ಸೀತೆ ಹೇಗೆ ಹೊಗಳುತ್ತಾಳೆ?

6. ಕವಿತೆ ಎಂಥ ಘಟನಾವಳಿಗಳಲ್ಲಿ ಹುಟ್ಟುತ್ತದೆ ಎಂದು ಕವಯಿತ್ರಿ ಹೇಳಿದ್ದಾರೆ?

7. ಕೂಡಲಸಂಗಮನು ಒಲಿಯುವ ಪರಿ ಹೇಗೆ ಎಂದು ಬಸವಣ್ಣ ತಿಳಿಸಿದ್ದಾನೆ?

8. ಅನುಗಾಲವು ಯಾವುದರ ಚಿಂತೆ ಎಂದು ಪುರಂದರದಾಸರು ಹೇಳಿದ್ದಾರೆ?

9. ಜಗತ್ತು ಅತ್ತಿಮಬ್ಬೆಯನ್ನು ಏನೆಂದು ಹೊಗಳುತ್ತಿದೆ?

10. ಪಂಪ ಕವಿ ಮರಿದುಂಬಿಯಾಗಿ ಹುಟ್ಟಲು ಏಕೆ ಬಯಸುತ್ತಾನೆ?

**X. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ ಸಮನ್ವಯಗೊಳಿಸಿ.** **(1 × 3 = 3)**

1. ನುಡಿದರೆ ಮುತ್ತಿನ ಹಾರದಂತಿರಬೇಕು.

**XI. ಕೆಳಗಿನ ಕವಿ/ಲೇಖಕರಲ್ಲಿ ಯಾರಾದರೂ ನಾಲ್ವರ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಬರೆಯಿರಿ :** **(4 × 3 = 12)**

1. ತೀ. ನಂ. ಶ್ರೀಕಂಠಯ್ಯ
2. ಪೂರ್ಣಚಂದ್ರ ತೇಜಸ್ವಿ
3. ದ.ರಾ. ಬೇಂದ್ರೆ
4. ಪು.ತಿ. ನರಸಿಂಹಾಚಾರ್
5. ಕವಿ ರನ್ನ

**XII. ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಎರಡನ್ನು ವಿಸ್ತರಿಸಿ ಬರೆಯಿರಿ.** **(2 × 3 = 6)**

1. ಶಕ್ತಿಗಿಂತ ಯುಕ್ತಿ ಮೇಲು

2. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

3. ದೇಶ ಸುತ್ತಿ ನೋಡು ; ಕೋಶ ಓದಿ ನೋಡು

[ Turn over

**XIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದಕ್ಕೆ ಆರೆಂಟು ವಾಕ್ಯಗಳಲ್ಲಿ ಉತ್ತರಿಸಿ :** **(5 × 4 = 20)**

1. 'ಆಹುತಿ' ಕಥೆಯಲ್ಲಿ ಕಥಾನಾಯಕ ತನ್ನ ಮನೆ ಬಿಟ್ಟು ಹೋಗಲು ಕಾರಣವೇನು?
2. ಮೇಷ್ಟ್ರ ಹೆಂಡತಿ ಶಾಲೆಗೆ ಬರಲು ಕಾರಣವೇನು? ಅದರ ಪರಿಣಾಮವೇನಾಯಿತು?
3. ಬೆಳಗಿನ ಜಾವದ ಸವಿನಿದ್ದೆಯ ಬಗೆಗೆ ಲೇಖಕ ಅ.ರಾ. ಮಿತ್ರರ ಅಭಿಪ್ರಾಯವನ್ನು ತಿಳಿಸಿ.
4. 'ಭರತಭೂಮಿ ನನ್ನ ತಾಯಿ' ಕವನದಲ್ಲಿ ವ್ಯಕ್ತವಾಗಿರುವ ಭರತಭೂಮಿಯ ಮಹತ್ವವನ್ನು ತಿಳಿಸಿ.
5. 'ನಾವೆಲ್ಲರೂ ಒಂದೇ ಜಾತಿ' ಕವನದಲ್ಲಿ ಕವಿ ಅಡಿಗರು ಭಾವೈಕ್ಯತೆ ಮಹತ್ವವನ್ನು ಹೇಗೆ ವಿವರಿಸಿದ್ದಾರೆ?
6. ಇಂದುಮುಖಿಯರ ಎದುರಿನಲ್ಲಿ ಉತ್ತರನು ತನ್ನ ಪರಾಕ್ರಮವನ್ನು ಹೇಗೆ ವ್ಯಕ್ತಪಡಿಸಿದನು?

**XIV. ಪದ್ಯಭಾಗದ ಸಾರಾಂಶವನ್ನು ಬರೆಯಿರಿ.** **(1 × 4 = 4)**

1. ಎಂದು ಬರುವಳೊ, ಕಾಣೆ ನನ್ನೆದೆಯನಾಳುವಾಕೆ
ಅಂದು ಹಸೆಮಣೆಯ ಮೇಲೆನ್ನೊಡನೆ ಬೆಳಗಿದಾಕೆ
ಸಡಗರದಿ ನನ್ನೊಡನೆ ಒಂದಾಗಿ ಸಾಗುವಾಕೆ,
ನಡುಗಡಲ ತೆರೆಗಳಲಿ ನರ್ತಿಸುವ ರತ್ನನೌಕೆ.

**XV. ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಕುರಿತು ಸುಮಾರು ಹತ್ತು ವಾಕ್ಯಗಳ ಪ್ರಬಂಧವೊಂದನ್ನು ಬರೆಯಿರಿ.** **(1 × 5 = 5)**

1. ನನ್ನ ಮೆಚ್ಚಿನ ಪುಸ್ತಕ
2. ಜನಸಂಖ್ಯಾ ಸಮಸ್ಯೆಗಳು
3. ಸಾಂಕ್ರಾಮಿಕ ರೋಗಗಳು

**XVI.** 1. ಪರೀಕ್ಷಾ ಸಿದ್ಧತೆಯನ್ನು ವಿವರಿಸಿ ದೂರದ ಊರಿನಲ್ಲಿರುವ ನಿಮ್ಮ ತಂದೆಯವರಿಗೆ ಪತ್ರವನ್ನು ಬರೆಯಿರಿ. **(1 × 5 = 5)**

**ಅಥವಾ**

2. ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಹಾಗೂ ಅಂಕಪಟ್ಟಿಯನ್ನು ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯ ಶಿಕ್ಷಕರಿಗೆ ಮನವಿ ಪತ್ರವನ್ನು ಬರೆಯಿರಿ.

---

SEAL